# ಸಮುದಾಯ ಸಂಘಟಣೆ

## ಸಮುದಾಯದವರನ್ನು ಒಂದುಗೂಡಿಸುವುದಕ್ಕಾಗಿ ಅಂಗನವಾಡಿ ಕಾರ್ಯಕರ್ತೆ ಏನು ಮಾಡಬೇಕು?

- ಪೌಷ್ಠಿಕಾಂಶ ಮತ್ತು ಆರೋಗ್ಯ ಶಿಕ್ಷಣ ಮಾಹಿತಿಗಳನ್ನು ಮತ್ತು ಚಟುವಟಿಕೆಗಳನ್ನು ಸಮುದಾಯ ವಿಸ್ತರಿಸುವುದು.
- ಪೌಷ್ಠಿಕಾಂಶ ಮತ್ತು ಆರೋಗ್ಯ ಸಂಬಂಧಿತ ಮಾಹಿತಿಗಳನ್ನು ಮತ್ತು ಸಂದೇಶಗಳನ್ನು ಸಮುದಾಯಕ್ಕೆ ತಲುಪಿಸಲು ಟಿವಿ, ನಾಟಕ ರೇಡಿಯೋ, ಜಾನಪದ ಗೀತೆಗಳು ಇತ್ಯಾದಿ ಸಮೂಹ ಮಾದ್ಯಮಗಳನ್ನು ಉಪಯೋಗಿಸಿಕೊಳ್ಳಬೇಕು.
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ ಐ.ಇ.ಸಿ. ಪ್ರಚಾರ ಸಾಮಾಗ್ರಿಯನ್ನು ಉಪಯೋಗಿಸಿಕೊಂಡು ಐ.ವೈ.ಸಿ.ಎಫ್. ಕ್ರಮಗಳು, ಖಾಯಿಲೆ ವೇಳೆಯಲ್ಲಿ ಮತ್ತು ಗರ್ಭಾವಸ್ಥೆಯಲ್ಲಿ ಆರೈಕೆ, ಆರೋಗ್ಯಕರ ಆಹಾರ ಅಭ್ಯಾಸಗಳು ಮೊದಲಾದವುಗಳ ಕುರಿತಂತೆ ಸಮುದಾಯದಲ್ಲಿ ಪ್ರಚಾರ ಮಾಡಬೇಕು.
- ಸಮುದಾಯದವರಿಗೆ ಪ್ರೇರಣೆ ನೀಡುವುದಕ್ಕಾಗಿ ತಾಯಂದಿರ ಸಭೆಗಳು ಮತ್ತು ಸಮುದಾಯ ಸಭೆಗಳನ್ನು ಉಪಯೋಗಿಸಿ. ಪಿ.ಎಲ್.ಎ. ತಾಂತ್ರಿಕತೆಯನ್ನು ಉಪಯೋಗಿಸಬಹುದು.
- ಸಮುದಾಯದ ಅಗತ್ಯತೆಗಳನ್ನು ತಿಳಿದು ಅವುಗಳನ್ನಾಧರಿಸಿದ ಸಮುದಾಯ ರೇಡಿಯೋ ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಬಗ್ಗೆ ಯೋಚಿಸಬಹುದು.



## ಸಮುದಾಯ ಸಂಘಟಣೆಯ ಗುರಿಗಳು

• • •

- ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ನೆರವಾಗುತ್ತದೆ.
- ಸಮುದಾಯದ ಸೂಕ್ಷ್ಮ ವರ್ಗದವರಿಗೆ ನೆರವು ನೀಡುವುದಕ್ಕಾಗಿ ಹೊಸತಾದ ಮತ್ತು ಹೊಸತನಗಳಿಂದ ಕೂಡಿರುವ ವಿಧಾನಗಳನ್ನು ಅಳವಡಿಸುವುದು.
- ಕಾರ್ಯಕ್ರಮ ನಿರ್ವಹಣೆಯಲ್ಲಿ ದಕ್ಷತೆ ಮತ್ತು ಪರಿಣಾಮಯುಕ್ತತೆಗಳನ್ನು ಹೆಚ್ಚಿಸಬೇಕು.
- ಸಮುದಾಯದಲ್ಲಿ ತಿಳುವಳಿಕೆ ಹೆಚ್ಚುತ್ತದೆ ಹಾಗೂ ಸರಕಾರದಿಂದ ಒದಗಿಸಲಾಗುವ ಸೌಲಭ್ಯಗಳ ಲಭ್ಯತೆ ಹೆಚ್ಚುತ್ತದೆ.
- ಜಿಲ್ಲೆಯ ವಿವಿಧ ಪ್ರದೇಶಗಳಿಗೆ ತಲುಪುವ ಸಂಭಾವ್ಯತೆಗಳು ಹೆಚ್ಚುತ್ತವೆ.
- ಸಮುದಾಯದಲ್ಲಿ ಆಸಕ್ತಿ ಹೆಚ್ಚುತ್ತದೆ.

## ಸಮುದಾಯವು ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದಕ್ಕಾಗಿ ನೆನಪಿನಲ್ಲಿರಿಸಬೇಕಾದ ಅಂಶಗಳು

- ಅಂಗನವಾಡಿ ಕಾರ್ಯಕರ್ತೆ ಸಮುದಾಯವನ್ನು, ಸಂಘಟಿಸುವ ಮತ್ತು ಅವರಿಗೆ ಶಿಕ್ಷಣ ನೀಡುವ ತರಬೇತಿಯನ್ನು ಹೊಂದಿರಬೇಕು. ಇದರಿಂದಾಗಿ ಸಮುದಾಯವು ಸಮಗ್ರ ಶಿಶು ಅಭಿವೃದ್ಧಿ ಸೇವೆಗಳು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಬಹುದು ಹಾಗೂ ಮಗುವಿನ ಬದುಕುವಿಕೆ ಮತ್ತು ಅಭಿವೃದ್ಧಿಗಾಗಿ ತಮ್ಮ ಕೊಡುಗೆಗಳನ್ನು ನೀಡಬಹುದು.
- ಸಮುದಾಯ ಹಾಗೂ ಅದರ ಸಮಸ್ಯೆಗಳು ಮತ್ತು ಅಗತ್ಯತೆಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಸಮುದಾಯದಲ್ಲಿರುವ ನಂಬಿಕೆಗಳು ಮತ್ತು ಪದ್ಧತಿಗಳನ್ನು ತಿಳಿದುಕೊಳ್ಳಬೇಕು.
- ಸಮುದಾಯದವರು ಹೇಳುವುದನ್ನು ಗಮನವಿಟ್ಟು ಆಲಿಸಬೇಕು. ಅವರ ನಂಬಿಕೆಗಳು ಮತ್ತು ಪದ್ಧತಿಗಳಿಗೆ ವಿರುದ್ಧವಾಗಿರುವ ಯಾವುದನ್ನೂ ಏಕಾಏಕಿಯಾಗಿ ಆರಂಭಿಸಬಾರದು.
- ಸಮುದಾಯ ಪ್ರಕ್ರಿಯೆಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು ಮತ್ತು ಪರಿಸ್ಥಿತಿಗೆ ಹೊಂದುಕೊಳ್ಳುವುದನ್ನು ಕಲಿಯಬೇಕು. ಸಮಗ್ರ ಶಿಶು ಅಭಿವೃದ್ಧಿ ಸೇವೆಗಳು ಕಾರ್ಯಕ್ರಮದಲ್ಲಿ ಆರಂಭದಿಂದಲೇ ಸಮುದಾಯದವರನ್ನು ತೊಡಗಿಸಿಕೊಳ್ಳಬೇಕು.
- ಸಮುದಾಯದ ವಿರೋಧಾಭಾಸದ ಅನುಭವಗಳನ್ನು ಗೌರವಿಸಬೇಕು/ಅವುಗಳಿಗೆ ಪ್ರಾಮುಖ್ಯತೆ ನೀಡಬೇಕು. ಅವುಗಳನ್ನು ಹಂಚಿಕೊಳ್ಳುತ್ತಾ ಮತ್ತು ಅದರೊಂದಿಗೆ ಸೇರಿಕೊಳ್ಳುತ್ತಾ ಅವುಗಳನ್ನು ಕಡಿಮೆ ಮಾಡಲು ಪ್ರಯತ್ನಿಸಬೇಕು.

*ಸಮುದಾಯದವರನ್ನು ಒಂದುಗೂಡಿಸಲು ಸಾಕಷ್ಟು ಸಮಯ ಮತ್ತು ಪರಿಶ್ರಮ ಬೇಕಾಗುತ್ತವೆ. ನೀವು ನಿಮ್ಮ ಕೆಲಸಗಳನ್ನು ಹೆಚ್ಚು ಹೆಚ್ಚಾಗಿ ಅರಿತುಕೊಂಡಂತೆಲ್ಲಾ ಹಾಗೂ ಸತತವಾದ ತರಬೇತಿ ಮತ್ತು ಬೆಂಬಲಗಳು ಸಿಗುತ್ತಿರುವಾಗ ಕ್ರಮೇಣ ನೀವು ನಿಮ್ಮ ಸಮುದಾಯದವರ ಯಾವುದೇ ಹಕ್ಕುಗಳಿಗೆ ಚ್ಯುತಿ ಬಾರದಂತೆ ಅವರನ್ನು ಒಂದುಗೂಡಿಸಲು ಕಲಿತುಕೊಳ್ಳುತ್ತೀರಿ. ಇದರಲ್ಲಿ ನಿಮ್ಮ ತಾಳ್ಮೆ ಮತ್ತು ಆಶಾವಾದವನ್ನು ಯಾವತ್ತೂ ಕಳೆದುಕೊಳ್ಳಬೇಡಿ.*

## ಸಮುದಾಯ ಸಂಘಟಣೆಯಲ್ಲಿ ಅಂಗನವಾಡಿ ಕಾರ್ಯಕರ್ತೆ ಕೈಗೊಳ್ಳಬೇಕಾದ ಪ್ರಾಮುಖ್ಯವಾದ ಹೆಜ್ಜೆಗಳು

